**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 51/2023**

ಪಿ.ಡಬ್ಲುಃ 7 ಸಿಡಬ್ಲುಃ 22

ಸಾಕ್ಷಿಯ ಹೆಸರು : ಲೋಕೇಶ್

ತಂದೆಯ ಹೆಸರು : ನಿಂಗಪ್ಪ

ವಯಸ್ಸು : 45 ವರ್ಷ

ವೃತ್ತಿ : ಆಟೋ ಚಾಲಕ

ವಾಸಸ್ಥಳ : ಬಳ್ಳಾರಿ

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 06-01-2024

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ಸಾಕ್ಷಿಗೆ ದಿಃ 23-03-2023 ರ ನೋಟಿಸ್ ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-15 ಎಂದು , ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ನಿಪಿ-2 ರನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಗಾಂಧಿನಗರ ಪೊಲೀಸರು ಪಡೆದುಕೊಂಡಿರುತ್ತಾರೆ. ನಾನು ಡಿ ಆರ್ ಪೊಲೀಸ್ ಕ್ವಾರ್ಟ್ರಸ್ ಬಳ್ಳಾರಿ ಬಳಿ ನನ್ನ ಆಟೋ ತೆಗೆದುಕೊಂಡು ಬಾಡಿಗೆಗೆ ಹೋಗಿದ್ದೆ ಆ ಕಾರಣ ನನ್ನ ಸಹಿಗಳನ್ನು ಪೊಲೀಸರು ಪಡೆದಿರುತ್ತಾರೆ. ಜಿ.11 ನಂಬರ್ ನ ಕ್ವಾರ್ಟ್ರಸ್ ನಲ್ಲಿ ಜಾಫರ್ ಎನ್ನುವ ಪೊಲೀಸ ನ ಕೊಲೆಯಾಗಿತ್ತು. ಸದರಿ ಮನೆಯ ಹಾಲ್ ನಲ್ಲಿ ಕೌದಿ , ತಲೆದಿಂಬು, ಒಂದು ಬೆಡ್ ಶೀಟ್, ಒಂದು ಟವಲ್ , ಒಂದು ಕರಿಮಣಿ ಸರಿ , ಒಂದು ಪೋನ್ , ಗೋಡೆಗೆ ಅಂಟಿದ ರಕ್ತದ ಕಲೆಗಳ ಸ್ಯಾಂಪಲ್ , ಕೌದಿಯ ಸ್ಯಾಂಪಲ್ ಗಳನ್ನು ಪೊಲೀಸರು ತೆಗೆದುಕೊಂಡರು. ಸದರಿ ವಸ್ತುಗಳನ್ನು ನಮಗೆ ತೋರಿಸಿ ಪಂಚನಾಮೆ ಮಾಡಿ ಜಪ್ತುಗೊಳಿಸಿರುತ್ತಾರೆ. ನನ್ನ ಜೊತೆ ಚಾಸಾ-23 ರವರು ಹಾಜರಿದ್ದರು. ಸದರಿ ಪಂಚನಾಮೆಯನ್ನು ಬೆಳಗಿನ 9-00 ಗಂಟೆಯಿಂದ 10-30 ರ ವರೆಗೆ ಮಾಡಿರುತ್ತಾರೆ. ಸದರಿ ಪಂಚನಾಮೆ ಕಾಲಕ್ಕೆ ಪೋಟೋಗಳನ್ನು ತೆಗೆದು ರಕ್ತದ ಕಲೆಗಳನ್ನು ತೋರಿಸಿರುತ್ತಾರೆ.

ಸಾಕ್ಷಿಗೆ ನಿಪಿ-4 ರಿಂದ 14 ನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-4,7,8,13 ರಲ್ಲಿ ತಾನು ಮತ್ತು ಚಾಸಾ-23 ರವರು ಇರುವುದಾಗಿ ತೋರಿಸಿರುತ್ತಾನೆ. ಜಪ್ತುಗೊಳಿಸಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯೂ ಮು.ಮಾ-3 ರಿಂದ 12 ನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀಸವಾಲು ಆರೋಪಿ ಪರವಾಗಿ ಶ್ರೀ ಎನ್ ಎಸ್ ಎಸ್ ವಕೀಲರಿಂದಃ

ಡಿ ಆರ್ ಕ್ವಾಟರ್ಸ್ ಹತ್ತಿರ ನಾನು ಬಾಡಿಗೆಗೆ ತೆಗೆದುಕೊಂಡ ಗಿರಾಕಿಯನ್ನು ಬಿಡಲು ಹೋಗಿದ್ದೆ. ಸದರಿ ಗಿರಾಕಿಯ ಹೆಸರು ನನಗೆ ಈಗ ಗೊತ್ತಿಲ್ಲ. ಸದರಿ ಗಿರಾಕಿಯನ್ನು ಕೊಲೆಯಾದ ಮನೆಯ ಹತ್ತಿರ ಇಳಿಸಿರುತ್ತೇನೆ. ಪೊಲೀಸರು ನನಗೆ ಆ ಸ್ಥಳದಲ್ಲೇ ನೋಟಿಸ್ ಕೊಟ್ಟಿರುತ್ತಾರೆ. ಸದರಿ ಸ್ಥಳದಿಂದ ಅಲ್ಲೆ ಜಿ-11 ಮನೆಗೆ ನನ್ನನ್ನು ಕರೆದುಕೊಂಡು ಹೋದರು. ಸದರಿ ಹಾಲ್ ನ್ನು ನನಗೆ ಪೊಲೀಸರು ತೋರಿಸಿರುತ್ತಾರೆ. ಚಾಸಾ-23 ರವರು ನನಗೆ ಪರಿಚಯ. ಸದರಿ ಅವರು ಸಹ ಅಲ್ಲಿ ಬಾಡಿಗೆಗೆ ಬಂದಿದ್ದರು. ಪೊಲೀಸರು ಸಾಮಾನ್ಯವಾಗಿ ನಾವು ಆಟೋ ಓಡಿಸುವುದರಿಂದ ಪರಿಚಯ ಇರುತ್ತಾರೆ ಎಂದರೆ ಸರಿಯಲ್ಲ. ನಾನು ಈಗಾಗಲೇ ಸಾಕಷ್ಟು ಪೊಲೀಸ್ ಪ್ರಕರಣಗಳಲ್ಲಿ ಸಾಕ್ಷಿ ಕೊಟಿಟರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ಸ್ಥಳಕ್ಕೆ ಹೋಗಿಲ್ಲ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಸಿಪಿಐ ಮತ್ತು ಕೊಟ್ರೇಶ್ ನಾಯ್ಕು ಪೊಲೀಸ ಮತ್ತು ಬರಹಗಾರ ಪೊಲೀಸನು ಇದ್ದರು. ಮತ್ತೆ ಇಬ್ಬರು ಪಂಚರು ಇದ್ದರು. ಮತ್ತೆ ಮನೆಯಲ್ಲಿ ಬೇರೆ ಯಾರು ಇರಲಿಲ್ಲ. ನನ್ನ ಸಮಕ್ಷಮ ಪೊಲೀಸರು ಮು.ಮಾ-3 ರಿಂದ 12 ನ್ನು ಜಪ್ತುಗೊಳಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.